# ನಿಜವಾದ ತವಕ್ಕುಲ್

حقيقة التوكل

[ Kannada – ಕನ್ನಡ – الكنادي ]


ಶೈಖ್ ಸಾಲಿಹ್ ಅಲ್‌ಫೌಝಾನ್

الشيخ صالح الفوزان



ಅನುವಾದ: ಮುಹಮ್ಮದ್ ಹಂಝ ಪುತ್ತೂರು
ಪರಿಶೀಲನೆ: ಅಬ್ದುಸ್ಸಲಾಂ ಕಾಟಿಪಳ್ಳ

ترجمة: محمد حمزة البتوري
مراجعة: عبد السلام كاتيبلا

# ನಿಜವಾದ ತವಕ್ಕುಲ್

ಪ್ರಶ್ನೆ:

ತವಕ್ಕುಲ್‌ನ ಉದ್ದೇಶವೇನು? ನಿಜವಾದ ತವಕ್ಕುಲ್ ಹೇಗೆ? ಕಷ್ಟಕಾಲದಲ್ಲಿ ಮಾತ್ರ ಅಲ್ಲಾಹನ ಮೇಲೆ ತವಕ್ಕುಲ್ ಮಾಡಬೇಕೇ? ಅಥವಾ ಎಲ್ಲ ವಿಷಯಗಳಲ್ಲೂ ಅಲ್ಲಾಹನ ಮೇಲೆ ತವಕ್ಕುಲ್ ಮಾಡಬೇಕೇ? ತವಕ್ಕುಲ್ ಎಂದರೆ ಒಬ್ಬನಿಗೆ ಕಾರ್ಯವನ್ನು ಒಪ್ಪಿಸಿ ಸುಮ್ಮನೆ ಕುಳಿತುಕೊಳ್ಳುವುದು ಎಂದು ಕೆಲವರು ಅರ್ಥ ಮಾಡಿಕೊಂಡಿದ್ದಾರೆ. ಇವರಿಗೆ ತಾವು ನೀಡುವ ಉತ್ತರವೇನು?

ಉತ್ತರ:

ಭಾಷಿಕ ಅರ್ಥದಲ್ಲಿ *ತವಕ್ಕುಲ್* ಎಂದರೆ ಅವಲಂಬನೆ ಮತ್ತು ಅರ್ಪಣೆ. ಅಲ್ಲಾಹನ ಮೇಲೆ *ತವಕ್ಕುಲ್* ಮಾಡುವುದು ಎಂದರೆ ಅಲ್ಲಾಹನನ್ನು ಅವಲಂಬಿಸುವುದು ಮತ್ತು ಕಾರ್ಯಗಳನ್ನು ಅವನಿಗೆ ಅರ್ಪಿಸುವುದು.

*ತವಕ್ಕುಲ್* ಮಾಡುವುದು ಕಡ್ಡಾಯ. ಅಲ್ಲಾಹನ ಮೇಲೆ ಮಾತ್ರ *ತವಕ್ಕುಲ್* ಮಾಡಬೇಕು. ಅಲ್ಲಾಹು ಹೇಳುತ್ತಾನೆ:

﴿ وَعَلَى ٱللَّهِ فَتَوَكَّلُوٓاْ إِن كُنتُم مُّؤۡمِنِينَ ۝٢٣ ﴾ [المائدة : 23]

*“ನೀವು ವಿಶ್ವಾಸಿಗಳಾಗಿದ್ದರೆ ಅಲ್ಲಾಹನ ಮೇಲೆ ತವಕ್ಕುಲ್ ಮಾಡಿರಿ.”* [ಕುರ್‌ಆನ್ 5:23]

﴿ إِن كُنتُمۡ ءَامَنتُم بِٱللَّهِ فَعَلَيۡهِ تَوَكَّلُوٓاْ إِن كُنتُم مُّسۡلِمِينَ ۝٨٤ ﴾ [يونس : 84]

*“ನೀವು ಅಲ್ಲಾಹನಲ್ಲಿ ವಿಶ್ವಾಸವಿಟ್ಟವರಾಗಿದ್ದರೆ ಅವನ ಮೇಲೆ ತವಕ್ಕುಲ್ ಮಾಡಿರಿ. ನೀವು ಮುಸ್ಲಿಮರಾಗಿದ್ದರೆ.”* [ಕುರ್‌ಆನ್ 10:84]

*ತವಕ್ಕುಲ್* ಮಾಡುವುದನ್ನು ಅಲ್ಲಾಹು ಈಮಾನ್ ಮತ್ತು ಇಸ್ಲಾಂಗೆ ಒಂದು ಷರತ್ತನ್ನಾಗಿ ಮಾಡಿದ್ದಾನೆ. *ತವಕ್ಕುಲ್* ಮಾಡುವುದಕ್ಕಿರುವ ಪ್ರಾಮುಖ್ಯತೆಯೇನೆಂದರೆ ಅದು ಇಬಾದತ್ತಿನ ರೂಪಗಳಲ್ಲೇ ಅತ್ಯಂತ ಸಮಗ್ರವಾದುದು. ಅದು ತೌಹೀದಿನ ಅತ್ಯುಚ್ಛವಾದ, ಅತಿದೊಡ್ಡದಾದ ಮತ್ತು ಅತಿಶ್ರೇಷ್ಠವಾದ ಸ್ಥಾನದಲ್ಲಿದೆ. ಕಾರಣ, ಸತ್ಕರ್ಮಗಳು ಉದ್ಭವವಾಗುವುದು ಅದರ ಮೂಲಕವೇ ಆಗಿದೆ.

ಎಲ್ಲ ವಿಷಯಗಳಲ್ಲೂ ಅಲ್ಲಾಹನ ಮೇಲೆ *ತವಕ್ಕುಲ್* ಮಾಡಬೇಕು. ಕೆಲವು ವಿಷಯಗಳಲ್ಲಿ *ತವಕ್ಕುಲ್* ಮಾಡುವುದು ಮತ್ತು ಕೆಲವು ವಿಷಯಗಳಲ್ಲಿ *ತವಕ್ಕುಲ್* ಮಾಡದಿರುವುದು ಸರಿಯಲ್ಲ. ಬದಲಾಗಿ ಎಲ್ಲ ವಿಷಯಗಳಲ್ಲೂ ಅಲ್ಲಾಹನ ಮೇಲೆ *ತವಕ್ಕುಲ್* ಮಾಡಬೇಕು.

ಅಲ್ಲಾಹನ ಮೇಲೆ *ತವಕ್ಕುಲ್* ಮಾಡುವುದು ಎಂದರೆ ಅಲ್ಲಾಹು ಕಾರಣಗಳನ್ನಾಗಿ ಮಾಡಿರುವ ವಿಷಯಗಳ ಕಡೆಗೆ ಸುಳಿಯಬಾರದು ಎಂದಲ್ಲ. *ತವಕ್ಕುಲ್* ಮಾಡಬೇಕೆಂದು ಆಜ್ಞಾಪಿಸಿದ ಅಲ್ಲಾಹು ಕಾರ್ಯಕಾರಣಗಳನ್ನು ಸ್ವೀಕರಿಸಬೇಕೆಂದೂ ಆಜ್ಞಾಪಿಸಿದ್ದಾನೆ. ಅಲ್ಲಾಹು ಹೇಳುತ್ತಾನೆ:

﴿ وَأَعِدُّوا۟ لَهُم مَّا ٱسْتَطَعْتُم مِّن قُوَّةٍ ﴾ [الأنفال : 60]

*"ಅವರನ್ನು (ಶತ್ರುಗಳನ್ನು) ಎದುರಿಸಲು ನಿಮಗೆ ಸಾಧ್ಯವಾದಷ್ಟು ಶಕ್ತಿಯನ್ನು ಸಿದ್ಧಪಡಿಸಿಕೊಳ್ಳಿರಿ."* [ಕುರ್‌ಆನ್ 8:60]

ಅಲ್ಲಾಹು ಹೇಳುತ್ತಾನೆ:

﴿ خُذُوا۟ حِذْرَكُمْ ﴾ [النساء : 71]

*"ನೀವು ಜಾಗ್ರತೆಯನ್ನು ಪಾಲಿಸಿರಿ."* [ಕುರ್‌ಆನ್ 4:71]

ಆದರೆ ಫಲಿತಾಂಶ ಸಿಗಲು ಅಲ್ಲಾಹು ಕಾರಣವನ್ನಾಗಿ ಮಾಡಿರುವ ವಿಷಯಗಳ ಮೇಲೆ ಸಂಪೂರ್ಣ ಅವಲಂಬಿತವಾಗಬಾರದು. ಅವಲಂಬನೆ ಸಂಪೂರ್ಣವಾಗಿ ಅಲ್ಲಾಹನ ಮೇಲಾಗಿರಬೇಕು.

ಪ್ರವಾದಿ(ﷺ)ರವರು *ತವಕ್ಕುಲ್* ಮಾಡುವವರಲ್ಲೇ ಆದ್ಯ ಸ್ಥಾನದಲ್ಲಿರುವವರು. ಆದರೂ ಅವರು ತಮ್ಮ ಜೊತೆಗೆ ಶಸ್ತ್ರವನ್ನು ಒಯ್ಯುತ್ತಿದ್ದರು. ಯುದ್ಧಾಂಗಿ ಧರಿಸುತ್ತಿದ್ದರು. ತಲೆಯ ಮೇಲೆ ಯುದ್ಧ ಟೋಪಿ ಧರಿಸುತ್ತಿದ್ದರು.

ಜನರು ಹಜ್ಜ್ ನಿರ್ವಹಿಸುವಾಗ ತಮ್ಮ ಜೊತೆಗೆ ಸರಂಜಾಮುಗಳನ್ನು ಒಯ್ಯುತ್ತಿರಲಿಲ್ಲ. ಬದಲಾಗಿ ಎಲ್ಲವನ್ನೂ ಅಲ್ಲಾಹನ ಮೇಲೆ *ತವಕ್ಕುಲ್* ಮಾಡಿ ಬರಿಗೈಯಲ್ಲಿ ಹಜ್ಜ್‌ಗೆ ತೆರಳುತ್ತಿದ್ದರು. ತನ್ನಿಮಿತ್ತ ಅವರು ಹಜ್ಜ್‌ನ ಸಮಯದಲ್ಲಿ ಇತರರ ಮುಂದೆ ಕೈಚಾಚಬೇಕಾಗಿ ಬರುತ್ತಿತ್ತು. ಅವರು ಇದನ್ನು *ತವಕ್ಕುಲ್* ಎನ್ನುತ್ತಿದ್ದರು. ಆದರೆ ಈ ವಿಷಯದಲ್ಲಿ ಅಲ್ಲಾಹು ಹೀಗೆ ಆಯತ್ ಅವತೀರ್ಣಗೊಳಿಸಿದನು:

﴿ وَتَزَوَّدُوا۟ فَإِنَّ خَيْرَ ٱلزَّادِ ٱلتَّقْوَىٰ ﴾ [البقرة : 197]

*"ನೀವು ಸಿದ್ಧತೆ ಮಾಡಿಕೊಳ್ಳಿರಿ. ಸಿದ್ಧತೆಯಲ್ಲಿ ಅತ್ಯುತ್ತಮವಾದುದು ಅಲ್ಲಾಹನ ಭಯಭಕ್ತಿ."* [ಕುರ್‌ಆನ್ 2:197]

ಹೀಗೆ ಹೇಳಲಾಗುತ್ತದೆ: "ಸಂಪೂರ್ಣವಾಗಿ ಕಾರಣಗಳನ್ನು ಅವಲಂಬಿಸುವುದು ಶಿರ್ಕ್. ಸಂಪೂರ್ಣವಾಗಿ ಕಾರಣಗಳನ್ನು ವರ್ಜಿಸುವುದು ಶರೀಅತ್ತಿಗೆ ವಿರುದ್ಧ." ಆದುದರಿಂದ ನೀವು ನಿಮ್ಮ

*ತವಕ್ಕುಲನ್ನು* ಅಸಹಾಯಕತೆಯನ್ನಾಗಿ ಮಾಡಬಾರದು. ಅದೇ ರೀತಿ ನಿಮ್ಮ ಅಸಹಾಯಕತೆಯನ್ನು *ತವಕ್ಕುಲನ್ನಾಗಿ* ಮಾಡಬಾರದು. ಸ್ವರ್ಗವು ಸತ್ಕರ್ಮವೆಸಗುವುದೆಂಬ ಕಾರಣದ ಮೂಲಕವಲ್ಲದೆ ಲಭ್ಯವಾಗುವುದಿಲ್ಲ. ಹೆಚ್ಚು ಬಲ್ಲವನು ಅಲ್ಲಾಹು.

ಪ್ರಶ್ನೆ:

ಒಬ್ಬ ವ್ಯಕ್ತಿ ಅಲ್ಲಾಹನ ಮೇಲೆ *ತವಕ್ಕುಲ್* ಮಾಡಿದವನಾಗುವುದು ಹೇಗೆ?

ಉತ್ತರ:

ಒಬ್ಬ ವ್ಯಕ್ತಿ ಅಲ್ಲಾಹನ ಮೇಲೆ ನಿಜವಾದ *ತವಕ್ಕುಲ್* ಮಾಡಿದವನಾಗುವುದು, ಅವನು ಅಲ್ಲಾಹನನ್ನು ಸತ್ಯಸಂಧವಾಗಿ ಅವಲಂಬಿಸುವಾಗ, ಒಳಿತುಗಳೆಲ್ಲವೂ ಇರುವುದು ಅಲ್ಲಾಹನ ಕೈಯಲ್ಲಿ ಮತ್ತು ಕಾರ್ಯಗಳೆಲ್ಲವನ್ನೂ ನಿಯಂತ್ರಿಸುವವನು ಅಲ್ಲಾಹು ಎಂದು ಅರಿಯುವಾಗ. ಪ್ರವಾದಿ(ﷺ)ರವರು ಅಬ್ದುಲ್ಲಾಹ್ ಇಬ್ನ್ ಅಬ್ಬಾಸ್(رضي الله عنهما)ರಿಗೆ ಹಿತೋಪದೇಶ ಕೊಡುತ್ತಾ ಹೇಳಿದರು:

«يَا غُلَامُ، إِنِّي أُعَلِّمُكَ كَلِمَاتٍ، احْفَظِ اللَّهَ يَحْفَظْكَ، احْفَظِ اللَّهَ تَجِدْهُ تُجَاهَكَ، إِذَا سَأَلْتَ فَاسْأَلِ اللَّهَ، وَإِذَا اسْتَعَنْتَ فَاسْتَعِنْ بِاللَّهِ، وَاعْلَمْ أَنَّ الْأُمَّةَ لَوِ اجْتَمَعُوا عَلَى أَنْ يَنْفَعُوكَ بِشَيْءٍ لَمْ يَنْفَعُوكَ إِلَّا بِشَيْءٍ قَدْ كَتَبَهُ اللَّهُ لَكَ، وَلَوِ اجْتَمَعُوا عَلَى أَنْ يَضُرُّوكَ بِشَيْءٍ لَمْ يَضُرُّوكَ إِلَا بِشَيْءٍ قَدْ كَتَبَهُ اللَّهُ عَلَيْكَ»

*"ಓ ಹುಡುಗಾ! ನಾನು ನಿನಗೆ ಕೆಲವು ವಚನಗಳನ್ನು ಕಲಿಸಿಕೊಡುವೆನು. ನೀನು ಅಲ್ಲಾಹನನ್ನು ಭಯಪಡು ಆಗ ಅವನು ನಿನ್ನನ್ನು ಸಂರಕ್ಷಿಸುವನು. ನೀನು ಅಲ್ಲಾಹನನ್ನು ಭಯಪಡು. ಆಗ ನೀನು ಅವನನ್ನು ನಿನ್ನ ಮುಂದೆ ಕಾಣುವೆ. ಬೇಡುವುದಾದರೆ ಅಲ್ಲಾಹನಲ್ಲಿ ಬೇಡು. ಸಹಾಯ ಯಾಚಿಸುವುದಾದರೆ ಅಲ್ಲಾಹನಲ್ಲಿ ಸಹಾಯ ಯಾಚಿಸು. ಅರಿತುಕೋ! ಸಮುದಾಯವೆಲ್ಲ ಒಟ್ಟುಗೂಡಿ ನಿನಗೊಂದು ಉಪಕಾರ ಮಾಡಬೇಕೆಂದು ತೀರ್ಮಾನಿಸಿದರೆ ಅಲ್ಲಾಹು ನಿನಗೆ ವಿಧಿಸಿದ ವಿಷಯದಲ್ಲಲ್ಲದೆ ಉಪಕಾರ ಮಾಡಲು ಅವರಿಗೆ ಸಾಧ್ಯವಿಲ್ಲ. ಅವರೆಲ್ಲರೂ ಒಟ್ಟುಗೂಡಿ ನಿನಗೊಂದು ಹಾನಿ ಮಾಡಬೇಕೆಂದು ತೀರ್ಮಾನಿಸಿದರೆ ಅಲ್ಲಾಹು ನಿನಗೆದುರಾಗಿ ವಿಧಿಸಿದ ವಿಷಯದಲ್ಲಲ್ಲದೆ ನಿನಗೆ ಹಾನಿ ಮಾಡಲು ಅವರಿಗೆ ಸಾಧ್ಯವಿಲ್ಲ."* [ಅಹ್ಮದ್ 1/293; ಅತ್ತಿರ್ಮಿದೀ 7/203]

ಇಂತಹ ಒಂದು ವಿಶ್ವಾಸವಿರುವ ಮನುಷ್ಯನು ಅಲ್ಲಾಹನನ್ನು ಅವಲಂಬಿಸುವನು. ಅವನು ಅಲ್ಲಾಹನ ಹೊರತು ಬೇರೆ ಯಾರ ಕಡೆಗೂ ತಿರುಗಲಾರನು.

ಆದರೆ ಒಂದು ಕಾರ್ಯವು ಜರುಗಬೇಕಾದರೆ ಅಲ್ಲಾಹು ಅದಕ್ಕೆ ಕಾರಣಗಳನ್ನಿಟ್ಟಿದ್ದಾನೆ. ಈ ಕಾರಣಗಳನ್ನು ಸ್ವೀಕರಿಸುವುದು *ತವಕ್ಕುಲ್*‌ಗೆ ವಿರುದ್ಧವಲ್ಲ. ಬದಲಾಗಿ ಒಂದು ಕಾರ್ಯವು ಜರುಗಲು ಅಲ್ಲಾಹು ಕಾರಣವನ್ನಾಗಿ ಮಾಡಿರುವ ವಿಷಯಗಳನ್ನು ಸ್ವೀಕರಿಸುವುದು –ಅದು ಧಾರ್ಮಿಕವಾಗಿರಲಿ,

ಅಥವಾ ಐಹಿಕವಾಗಿರಲಿ– *ತವಕ್ಕುಲ್*‌ನ ಪೂರ್ಣತೆಯಲ್ಲಿ ಒಳಪಡುತ್ತದೆ. ಅದು ಈಮಾನ್‌ನ ಪೂರ್ಣತೆಯಲ್ಲಿ ಒಳಪಡುತ್ತದೆ. ಕಾರಣ, ಅಲ್ಲಾಹು ಎಲ್ಲ ವಿಷಯಗಳಿಗೂ ಕಾರಣಗಳನ್ನಿಟ್ಟಿದ್ದಾನೆ. ಪ್ರವಾದಿ(ﷺ)ರವರು ತವಕ್ಕುಲ್ ಮಾಡುವವರ ನಾಯಕನಾಗಿದ್ದರೂ ಸಹ ಅವರು ಯುದ್ಧದ ಸಂದರ್ಭ ಯುದ್ಧಾಂಗಿ ಧರಿಸುತ್ತಿದ್ದರು. ಚಳಿಯಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಿದ್ದರು. ಬದುಕುವುದಕ್ಕಾಗಿ ಮತ್ತು ಆರೋಗ್ಯವೃದ್ಧಿಗಾಗಿ ಆಹಾರ ಸೇವಿಸುತ್ತಿದ್ದರು. ಉಹುದ್ ಯುದ್ಧದ ಸಂದರ್ಭ ಅವರು ಎರಡು ಯುದ್ಧಾಂಗಿ ಧರಿಸಿದ್ದರು.

ಕಾರಣಗಳನ್ನು ಸಂಪೂರ್ಣ ವರ್ಜಿಸಿ ಅಲ್ಲಾಹನನ್ನು ಅವಲಂಬಿಸುವ ಮೂಲಕ *ತವಕ್ಕುಲ್*‌ನ ಸಂಪೂರ್ಣತೆ ಉಂಟಾಗುತ್ತದೆಂದು ವಾದಿಸುವವರು ವಾಸ್ತವದಲ್ಲಿ ಪ್ರಮಾದದಲ್ಲಿದ್ದಾರೆ. *ತವಕ್ಕುಲ್* ಮಾಡಬೇಕೆಂದು ಆಜ್ಞಾಪಿಸಿದ ಅಲ್ಲಾಹು ಕಾರಣಗಳನ್ನು ಸ್ವೀಕರಿಸಬೇಕೆಂದೂ ಆಜ್ಞಾಪಿಸಿದ್ದಾನೆ. ಯಾಕೆಂದರೆ ಪ್ರತಿಯೊಂದು ವಸ್ತುವಿಗೂ ಅವನು ಕಾರಣವನ್ನಿಟ್ಟಿದ್ದಾನೆ.

ನಾನು ಅಲ್ಲಾಹನ ಮೇಲೆ *ತವಕ್ಕುಲ್* ಮಾಡಿ ಮನೆಯಲ್ಲಿ ಕೂರುವೆನು. ನಾನು ಆಹಾರ ಹುಡುಕಿಕೊಂಡು ಹೋಗುವುದಿಲ್ಲ ಎಂದು ಒಬ್ಬ ವ್ಯಕ್ತಿ ಹೇಳುತ್ತಾನೆ. ಅವನಲ್ಲಿ ನಾವು ಹೀಗೆ ಹೇಳುತ್ತೇವೆ: ಇದು ಸರಿಯಲ್ಲ. ಇದು ನಿಜವಾದ *ತವಕ್ಕುಲ್* ಅಲ್ಲ. ಕಾರಣ, *ತವಕ್ಕುಲ್* ಮಾಡಬೇಕೆಂದು ಆಜ್ಞಾಪಿಸಿದ ಅಲ್ಲಾಹು ಹೇಳುತ್ತಾನೆ:

﴿ هُوَ ٱلَّذِي جَعَلَ لَكُمُ ٱلۡأَرۡضَ ذَلُولٗا فَٱمۡشُواْ فِي مَنَاكِبِهَا وَكُلُواْ مِن رِّزۡقِهِۦۖ وَإِلَيۡهِ ٱلنُّشُورُ ١٥ ﴾

[الملك : 15]

*“ನಿಮಗೆ ಭೂಮಿಯನ್ನು ವಿಧೇಯವನ್ನಾಗಿ ಮಾಡಿಕೊಟ್ಟವನು ಅವನೇ. ಆದುದರಿಂದ ಅದರ ಹೆಗಲುಗಳ ಮೇಲೆ ಸಂಚರಿಸಿ ಮತ್ತು ಅದರ ಆಹಾರಗಳನ್ನು ತಿನ್ನಿರಿ. ಪುನರುತ್ಥಾನಗೊಳಿಸಲಾಗುವುದು ಅವನ ಕಡೆಗೇ ಆಗಿದೆ.”* [ಕುರ್‌ಆನ್ 67:15]

ಇನ್ನೊಬ್ಬ ವ್ಯಕ್ತಿ ಹೇಳುತ್ತಾನೆ: ಮಗುವುಂಟಾಗಲು ಅಥವಾ ವಿವಾಹವಾಗಲು ನಾನು ಅಲ್ಲಾಹನ ಮೇಲೆ *ತವಕ್ಕುಲ್* ಮಾಡುತ್ತೇನೆ. ಹೀಗೆ ಹೇಳಿ ಅವನು ವಧುವನ್ನು ಹುಡುಕುತ್ತಾ ಹೋಗದೆ ಮನೆಯಲ್ಲಿ ಕುಳಿತರೆ ಜನರು ಆತನನ್ನು ಅವಿವೇಕಿಯೆಂದು ಕರೆಯುವರು. ಅವನ ಈ ಪ್ರವೃತ್ತಿಯು ಅಲ್ಲಾಹನ ಯುಕ್ತಿ ಆವಶ್ಯಪಡುವುದಕ್ಕೆ ವಿರುದ್ಧವಾಗಿದೆ.

ಒಬ್ಬ ವ್ಯಕ್ತಿ ವಿಷ ಸೇವಿಸಿ, ಈ ವಿಷ ನನಗೆ ತೊಂದರೆ ಕೊಡದಂತೆ ನಾನು ಅಲ್ಲಾಹನಲ್ಲಿ *ತವಕ್ಕುಲ್* ಮಾಡುತ್ತೇನೆ ಎನ್ನುತ್ತಾನೆ. ವಾಸ್ತವವಾಗಿ ಈತ ಅಲ್ಲಾಹನ ಮೇಲೆ *ತವಕ್ಕುಲ್* ಮಾಡಿದವನೇ ಅಲ್ಲ. ಕಾರಣ, *ತವಕ್ಕುಲ್* ಮಾಡಬೇಕೆಂದು ಆಜ್ಞಾಪಿಸಿದ ಅಲ್ಲಾಹು ನಮ್ಮೊಂದಿಗೆ ಹೇಳುತ್ತಾನೆ:

﴿ وَلَا تَقۡتُلُوٓاْ أَنفُسَكُمۡۚ ﴾ [النساء : 29]

*“ನೀವು ನಿಮ್ಮನ್ನೇ ಹತ್ಯೆ ಮಾಡಬಾರದು.”* [ಕುರ್‌ಆನ್ 4:29]

ಮುಖ್ಯವಾದ ವಿಷಯ, ಅಲ್ಲಾಹು ಏನನ್ನು ಕಾರಣವನ್ನಾಗಿ ಮಾಡಿದ್ದಾನೋ, ಆ ಕಾರಣಗಳನ್ನು ಸ್ವೀಕರಿಸುವುದು *ತವಕ್ಕುಲ್*‌ನ ಪೂರ್ಣತೆಗೆ ವಿರುದ್ಧವಲ್ಲ. ಬದಲಾಗಿ ಅದು *ತವಕ್ಕುಲ್*‌ನ ಪೂರ್ಣತೆಯಲ್ಲಿ ಒಳಪಟ್ಟದ್ದಾಗಿದೆ. ವಿನಾಶಕಾರಿ ವಿಷಯಗಳಿಗೆ ಆತ್ಮ ಪ್ರದರ್ಶನ ಮಾಡುವುದು *ತವಕ್ಕುಲ್* ಅಲ್ಲ. ಬದಲಾಗಿ ಅದು ಅಲ್ಲಾಹು ಆದೇಶಿಸಿದ *ತವಕ್ಕುಲ್*‌ಗೆ ವಿರುದ್ಧವಾಗಿದೆ. ಮಾತ್ರವಲ್ಲ, ಅಲ್ಲಾಹು ವಿರೋಧಿಸಿದ ಕಾರ್ಯವೂ ಆಗಿದೆ.

ಪ್ರಶ್ನೆ:

ಹೃದಯವನ್ನು ಅಲ್ಲಾಹನೊಂದಿಗೆ ಜೋಡಿಸಲು ನೆರವಾಗುವ ಮಾರ್ಗಗಳು ಯಾವುವು?

ಉತ್ತರ:

ಹೃದಯವನ್ನು ಅಲ್ಲಾಹನೊಂದಿಗೆ ಜೋಡಿಸಲು ನೆರವಾಗುವ ಮಾರ್ಗಗಳು, ಅತಿಯಾಗಿ ಕುರ್‌ಆನ್ ಪಾರಾಯಣ ಮಾಡುವುದು, ಅಲ್ಲಾಹನ ಅನುಗ್ರಹಗಳನ್ನು ಸ್ಮರಿಸುವುದು, ಅಲ್ಲಾಹನ ಶಿಕ್ಷೆಯನ್ನು ಭಯಪಡುವುದು, ಅಲ್ಲಾಹು ನೀಡುವ ಪ್ರತಿಫಲವನ್ನು ನಿರೀಕ್ಷಿಸುವುದು, ಅತಿಯಾಗಿ ದಿಕ್ರ್ ಹೇಳುವುದು. ಅಲ್ಲಾಹು ಹೇಳುತ್ತಾನೆ:

﴿ ٱلَّذِينَ ءَامَنُواْ وَتَطۡمَئِنُّ قُلُوبُهُم بِذِكۡرِ ٱللَّهِۗ أَلَا بِذِكۡرِ ٱللَّهِ تَطۡمَئِنُّ ٱلۡقُلُوبُ ٢٨ ﴾ [الرعد : 28]

*"ಅಲ್ಲಾಹನಲ್ಲಿ ವಿಶ್ವಾಸವಿಟ್ಟವರು ಮತ್ತು ಅಲ್ಲಾಹನನ್ನು ಸ್ಮರಿಸುವ ಮೂಲಕ ಹೃದಯಗಳು ಶಾಂತವಾಗುವವರು. ಅರಿಯಿರಿ. ಅಲ್ಲಾಹನನ್ನು ಸ್ಮರಿಸುವ ಮೂಲಕ ಹೃದಯಗಳು ಶಾಂತವಾಗುತ್ತವೆ."* [ಕುರ್‌ಆನ್ 13:28]

ಅದೇ ರೀತಿ ಹೃದಯವನ್ನು ಅಲ್ಲಾಹನೊಂದಿಗೆ ಜೋಡಿಸಲು ನೆರವಾಗುವ ಇನ್ನೊಂದು ಮಾರ್ಗ ಅಲ್ಲಾಹನ ನೈಸರ್ಗಿಕ ದೃಷ್ಟಾಂತಗಳನ್ನು ವೀಕ್ಷಿಸುವುದು ಮತ್ತು ಅವುಗಳ ಬಗ್ಗೆ ಚಿಂತಿಸುವುದು. ಅಲ್ಲಾಹು ಹೇಳುತ್ತಾನೆ:

﴿ إِنَّ فِي خَلۡقِ ٱلسَّمَٰوَٰتِ وَٱلۡأَرۡضِ وَٱخۡتِلَٰفِ ٱلَّيۡلِ وَٱلنَّهَارِ لَأٓيَٰتٖ لِّأُوْلِي ٱلۡأَلۡبَٰبِ ١٩٠ ٱلَّذِينَ يَذۡكُرُونَ ٱللَّهَ قِيَٰمٗا وَقُعُودٗا وَعَلَىٰ جُنُوبِهِمۡ وَيَتَفَكَّرُونَ فِي خَلۡقِ ٱلسَّمَٰوَٰتِ وَٱلۡأَرۡضِ رَبَّنَا مَا خَلَقۡتَ هَٰذَا بَٰطِلٗا سُبۡحَٰنَكَ فَقِنَا عَذَابَ ٱلنَّارِ ١٩١ ﴾ [آل عمران : 190-191]

*"ಖಂಡಿತವಾಗಿಯೂ ಆಕಾಶಗಳ ಮತ್ತು ಭೂಮಿಯ ಸೃಷ್ಟಿಗಳಲ್ಲಿ, ರಾತ್ರಿ ಮತ್ತು ಹಗಲುಗಳ ಬದಲಾವಣೆಯಲ್ಲಿ ಬುದ್ಧಿವಂತರಿಗೆ ದೃಷ್ಟಾಂತಗಳಿವೆ. ಅವರು ನಿಂತು, ಕುಳಿತು ಮತ್ತು ಮಲಗಿಕೊಂಡು ಅಲ್ಲಾಹನನ್ನು ಸ್ಮರಿಸುವವರು ಮತ್ತು ಆಕಾಶಗಳ ಮತ್ತು ಭೂಮಿಯ ಸೃಷ್ಟಿಯ ಬಗ್ಗೆ ಚಿಂತಿಸುವವರು. (ಅವರು ಹೇಳುವರು:) ಓ ನಮ್ಮ ರಬ್ಬೇ! ನೀನಿದನ್ನು ಮಿಥ್ಯವಾಗಿ ಸೃಷ್ಟಿಸಿಲ್ಲ. ನೀನು ಸರ್ವ ನ್ಯೂನತೆಗಳಿಂದಲೂ ಮುಕ್ತನು. ಆದುದರಿಂದ ನಮ್ಮನ್ನು ನರಕ ಶಿಕ್ಷೆಯಿಂದ ಪಾರು ಮಾಡು."* [ಕುರ್‌ಆನ್ 3:190–191]

ಪ್ರಶ್ನೆ:

ಆಹಾರವಸ್ತುಗಳನ್ನು ಖರೀದಿಸಿ ಮನೆಯಲ್ಲಿ ಸಂಗ್ರಹಿಸಿಡುವುದು *ತವಕ್ಕುಲ್‌ಗೆ* ವಿರುದ್ಧವಾಗುತ್ತದೆಯೇ?

ಉತ್ತರ:

ಆಹಾರವಸ್ತುಗಳನ್ನು ಖರೀದಿಸಿ ಮನೆಯಲ್ಲಿ ಸಂಗ್ರಹಿಸಿಡುವುದು ಉಪಯೋಗ ಮಾಡುವುದಕ್ಕಾಗಿದ್ದರೆ ಅದರಲ್ಲಿ ತೊಂದರೆಯಿಲ್ಲ. ಅದು *ತವಕ್ಕುಲ್‌ಗೆ* ವಿರುದ್ಧವಾಗುವುದಿಲ್ಲ. ಮಾತ್ರವಲ್ಲ, ಅದು ಅತ್ಯಗತ್ಯ ಕೂಡ. ಆದರೆ ಹೀಗೆ ಸಂಗ್ರಹಿಸಿಡುವ ಮೂಲಕ ಇತರ ಜನರಿಗೆ ತೊಂದರೆಯಾಗಬಾರದು. ಅಂದರೆ ಒಂದು ವಸ್ತುವಿನ ಉತ್ಪಾದನೆಯು ಕಮ್ಮಿಯಾಗಿರುವಾಗ ಆ ವಸ್ತುವನ್ನು ಹೇರಳ ಸಂಖ್ಯೆಯಲ್ಲಿ ಖರೀದಿಸಿ ಸಂಗ್ರಹಿಸಿಡುವುದರಿಂದ, ಆ ವಸ್ತುವಿಗೆ ತೀರಾ ಅಭಾವವುಂಟಾಗಿ ಬೆಲೆಯೇರಿಕೆಯಾಗುವ ಸಾಧ್ಯತೆಯಿದೆ. ಇದರಿಂದ ಇತರ ಜನರಿಗೆ ತೊಂದರೆಯಾಗುತ್ತದೆ.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أَجْمَعِين .

*********

IslamHouse.com